பாठ 2



# ಪಂಚಾಶತ್ತಮ ದಿನ



## ಸಬ್ಬತ್ತಿನ ಮಧ್ಯಾಹ್ನ:

ಈ ವಾರದ ಪಾಠದ ಅಧ್ಯಯನಕ್ಕಾಗಿ ಅ.ಪೋ ಕೃ 2:1-4, ಯೋಹಾನ 14:16, ಅ.ಪೋ ಕೃ 2:5-13, ಯೋವೇಲ 2:28-32, ಅ.ಪೋ ಕೃ 2:22-39, ಕೀರ್ತನೆ 110:1-3.

**ಸ್ಮರಣ ವಾಕ್ಯ: "ಈ ಯೇಸುವನ್ನೇ ದೇವರು ಎಬ್ಬಿಸಿದನು ಇದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ . ಆತನ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮ ವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವುದನ್ನು ಸುರಿಸಿದ್ದಾನೆ."** *(ಅ. ಪೋ. ಕೃ 2:32,33).*

ಪೆಂತಕೊಸ್ತ ಎಂಬುದು "ಪೆಂಟಕೋಸ್ಟ್ ಎಂಬ ಗರಿಕೆ ಪದದಿಂದ ಬಂದಿದ್ದು ಇದು ಯೆಹೂದ್ಯರ ವಾರಗಳ ಹಬ್ಬಕ್ಕೆ ನೀಡಲಾಗಿರುವ ಮತ್ತೊಂದು ಹೆಸರಾಗಿದೆ. ಇದರ ಮೂಲ ಅರ್ಥ "ಐವತ್ತನೆಯ ದಿನ" ಎಂದು ಇದು ತನ್ನ ಹೆಸರನ್ನು ಪಸ್ಕ ಹಬ್ಬದ ಮೊದಲ ದಿನದಂದು ಅರ್ಪಿಸುವ ಬಾರ್ಲಿ ಸುಗ್ಗಿಯ ದಿನದಿಂದ ಐವತ್ತನೆಯ ದಿನದ ತನಕ ಇದನ್ನು ಆಚರಿಸಲಾಗುತ್ತದೆ. ಇದೊಂದು ಸಂತೋಷದ ಮತ್ತು ಕೃತಜ್ಞತೆಯನ್ನು ಸಲ್ಲಿಸುವ ದಿನವಾಗಿತ್ತು, ಇಸ್ರಾಯೇಲ್ಯರು ತಮ್ಮ ಹೊಲದ ಗೋಧಿ ಬೆಳೆಯ ಪ್ರಥಮ ಫಲವನ್ನು ದೇವರ ಸನ್ನಿಧಿಗೆ ತರುವ ದಿನವಾಗಿತ್ತು. *(ವಿಮೋಚನೆಕಾಂಡ 34:22).*

ಈ ಹಬ್ಬವು ಆದಿ ಸಭೆಯ ಮೊದಲ ಅಧ್ಯಾತ್ಮಿಕ ಸುಗ್ಗಿಯ ಸರಿಯಾದ ಸಂಕೇತವಾಗಿತ್ತು. ಹಿಂದೆ ಎಂದು ಇಲ್ಲದ ರೀತಿಯಲ್ಲಿ ಪರಿಶುದ್ದಾತ್ಮನು ಸಭೆಯ ಮೇಲೆ ಸುರಿಸಲ್ಪಟ್ಟು ಶಿಷ್ಯರನ್ನು ಸಿದ್ದಪಡಿಸಿ ಒಂದೇ ದಿನದಲ್ಲಿ ಮೂರು ಸಾವಿರ ಜನರು ದೀಕ್ಷಾಸ್ನಾನ ತೆಗೆದುಕೊಂಡರು *(ಅ.ಪೋ.ಕೃ 2:41).* ಯೇಸುವು ಪರಲೋಕಕ್ಕೆ ಏರಿಹೊದದ್ದು ಅಲ್ಲಿ ಆತನಿಗೆ ಸನ್ಮಾನದ ನಂತರ ಪವಿತ್ರಾತ್ಮನ ಸುರಿಸುವಿಕೆಯು ಬಹಳ ಬೇಗನೆ ನಡೆಯಿತು. ಈ ಅದ್ಭುತವಾದ ಕಾರ್ಯವು ಸಾಮಾನ್ಯ ಹಾಗೂ ಅವಿದ್ಯಾವಂತರಾದ ಗಲಾಲಿಯದ ಅನಾಗರಿಕ ಜನರನ್ನು ಇಡೀ ಲೋಕವನ್ನೇ ಅಲುಗಾಡಿಸುವ ಧೈರ್ಯವಂತ ಹಾಗೂ ಶ್ರೇಷ್ಠ ವ್ಯಕ್ತಿಗಳಾಗಿ ಮಾರ್ಪಾಟು ಮಾಡಿತು.

ಪೆಂತಕೊಸ್ತ ದಿನವನ್ನು ಸಭೆಯ ಹುಟ್ಟಿದ ಹಬ್ಬ ಎಂದು ಕರೆಯುತ್ತಾರೆ. ಈ ದಿನದಲ್ಲಿ ಕ್ರಿಸ್ತನ ಹಿಂಬಾಲಕರು, ಅನ್ಯರು, ಮತ್ತು ಯೆಹೂದ್ಯರು ಎಲ್ಲರೂ ಕೂಡ ದೇವರ ಹೊಸ ಸಮುದಾಯಕ್ಕೆ ಸೇರಿಕೊಂಡರು.

**ಭಾನುವಾರ** ಜುಲೈ 8

## ಪವಿತ್ರಾತ್ಮನ ಬರೋಣ

ಯೇಸುವಿನ ಆಜ್ಞೆಗೆ ವಿಧೇಯರಾಗಿ, ವಿಶ್ವಾಸಿಗಳು ಪವಿತ್ರಾತ್ಮನ ವಾಗ್ದಾನಕ್ಕಾಗಿ ಯೆರುಷಲೇಮಿನಲ್ಲಿ ಕಾಯುತ್ತಿದ್ದರು, ಮತ್ತು ಅವರು ನಿರಂತರವಾಗಿ ಪ್ರಾರ್ಥನೆ, ಪ್ರಾಮಾಣಿಕವಾದ ಪಶ್ಚಾತ್ತಾಪದಿಂದ ಮತ್ತು ದೇವರನ್ನು ಸ್ತುತಿಸುತ್ತಾ ಆತ್ಮನ ವರಕ್ಕಾಗಿ ಕಾಯುತ್ತಿದ್ದರು. ಆ ದಿನವು ಬಂದಾಗ "ಅವರೆಲ್ಲರೂ ಒಂದು ಸ್ಥಳದಲ್ಲಿ ಕೂಡಿದ್ದರು" *(ಅ.ಪೋ. ಕೃ 2:1)* ಅವರು ಬಹುಶಃ ಅ.ಪೋ.ಕೃ 1 ರಲ್ಲಿ ತಿಳಿಸಿರುವ ಅದೇ ಮೇಲಂತಸ್ತಿನ ಕೋಣೆಯಲ್ಲಿ ಸೇರಿದ್ದರು. ಸ್ವಲ್ಪ ಸಮಯದಲ್ಲಿ ಅವರು ಸಾರ್ವಜನಿಕ ಸ್ಥಳಕ್ಕೆ ಬರುವುದಕ್ಕೆ ಸಿದ್ದತೆ ಮಾಡಿಕೊಳ್ಳುತ್ತಿದ್ದರು. *(ಅ.ಪೋ.ಕೃ 2:6-13*).

**ಅ.ಪೋ,ಕೃ 2:1-3. ಆತ್ಮನ ಸುರಿಸುವಿಕೆಯ ಜೊತೆಗೆ ಯಾವ ರೀತಿಯ ಅದ್ಭುತವಾದ ಕ್ರಿಯೆಗಳು ಜೊತೆಯಾದವು?**

____________________________________________________________

____________________________________________________________

ಆ ದೃಶ್ಯವು ಬಹಳ ರೋಚಕವಾಗಿತ್ತು. ಮೊದಲು ಪರಲೋಕದಿಂದ ದೊಡ್ಡ ಶಬ್ದವು ಉಂಟಾಯಿತು ಅದು ಯಾವ ರೀತಿಯಲ್ಲಿ ಇತ್ತು ಎಂದರೆ ದೊಡ್ಡ ಬಿರುಗಾಳಿಯು ಭೂಮಿಗೆ ಬಂದು ಅಪ್ಪಳಿಸಿದ ಹಾಗಿತ್ತು, ನಂತರ ದೊಡ್ಡ ಬೆಂಕಿಯ ಕೆನ್ನಾಲಿಗೆಗಳು ಅಲ್ಲಿ ನೆರೆದವರ ಮೇಲೆ ಬಂದು ನಿಂತವು.

ವಾಕ್ಯದಲ್ಲಿ ಗಾಳಿ ಮತ್ತು ಬೆಂಕಿಯು ಯಾವಾಗಲೂ ಕೂಡ ದೇವರ ಪ್ರಸನ್ನತೆಯ ಸಂಕೇತವಾಗಿರುತ್ತದೆ. *(ಉದಾಹರಣೆಗೆ 3:2, 19:16, ಧರ್ಮೋಪದೇಶಕಾಂಡ 4:15).* ಇದಕ್ಕೆ ಜೊತೆಯಾಗಿ ಗಾಳಿ ಮತ್ತು ಬೆಂಕಿಯು ದೇವರ ಆತ್ಮವನ್ನು ಪ್ರತಿನಿಧಿಸುತ್ತದೆ. *(ಯೋಹಾನ 3:8, ಮತ್ತಾಯ 3:11).* ಪಂಚಾಶತ್ತಮ ದಿನದ ಹಿನ್ನಲೆಯಲ್ಲಿ, ಇಂತಹ ಯಾವುದೇ ಉದಾಹರಣೆಯನ್ನು ತೆಗೆದುಕೊಂಡರು ಕೂಡ ಇವೆಲ್ಲವೂ ರಕ್ಷಣೆಯ ಚರಿತ್ರೆಯಲ್ಲಿ ವಿಶೇಷವಾದ ಆತ್ಮನ ಸುರಿಸುವಿಕೆಯನ್ನು ಸೂಚಿಸುತ್ತಾ ಪವಿತ್ರಾತ್ಮ ವಾಗ್ದಾನವನ್ನು ನೆರವೇರಿಸಿತು.

ಪವಿತ್ರಾತ್ಮನು ಯಾವಾಗಲೂ ಕೂಡ ಕ್ರಿಯಾಶೀಲನಾಗಿದ್ದನು. ಹಳೆಯ ಒಡಂಬಡಿಕೆಯಲ್ಲಿ ಆತನ ಕೆಲಸಗಳು ಗಮನಾರ್ಹ ರೀತಿಯಲ್ಲಿ ಗಮನಿಸಬಹುದು, ಆದರೆ ಅದು ಸಂಪೂರ್ಣವಾದ ರೀತಿಯಲ್ಲಿ ಕಾಣಿಸುವುದಿಲ್ಲ. "ಪಿತೃಗಳ ಸಮಯದಲ್ಲಿ ಪವಿತ್ರಾತ್ಮನ ಪ್ರಸನ್ನತೆಯು ಒಂದು ವಿಧಾನದಲ್ಲಿ ಮಾತ್ರ ಕಾಣುತಿತ್ತು, ಆದರೆ ಸಂಪೂರ್ಣವಾದ ರೀತಿಯಲ್ಲಿ ಪ್ರಚುರಕ್ಕೆ ಬರಲಿಲ್ಲ. ಈಗ, ರಕ್ಷಕನ ಮಾತಿಗೆ ವಿಧೇಯರಾಗಿ, ಶಿಷ್ಯರು ಈ ಅದ್ಭುತವಾದ ವರಕ್ಕಾಗಿ ಮನವಿಯನ್ನು ಸಲ್ಲಿಸಿದರು, ಮತ್ತು ಪರಲೋಕದಲ್ಲಿ ಯೇಸುವು ಇದಕ್ಕೆ ಅವಶ್ಯಕವಾದ ಮಧ್ಯಸ್ಥಿಕೆಯನ್ನು ವಹಿಸಿದನು, ಈ ವರವು ತನ್ನ ಜನರ ಮೇಲೆ ಸುರಿಸಲ್ಪಡಬೇಕು ಮತ್ತು ಅದರ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಟ್ಟನು." ಎಲೆನ್ ಜಿ ವೈಟ್. *ದಿ. ಆಕ್ಟ್ಸ್ ಆಫ್ ಅಪೋಸ್ಟ್ಲ ಸ್*, ಪುಟ 37.

ಸ್ನಾನಿಕನಾದ ಯೋಹಾನನು ಪರಿಶುದ್ಧಾತ್ಮನ ದಿಕ್ಷಾಸ್ನಾನದ ಕುರಿತಾಗಿ ಮೆಸ್ಸಿಯನ ಬರೋಣದ ಹಿನ್ನಲೆಯಲ್ಲಿ ಆಗಲೇ ತಿಳಿಸಿದ್ದನು. *(ಲೂಕ 3:16; ಇದನ್ನು ಅ.ಪೋ;ಕೃ 11:16)*, ಮತ್ತು ಯೇಸುವು ಸ್ವತಃ ಇದನ್ನು ಅನೇಕ ಬಾರಿ ತಿಳಿಸಿದ್ದನು. *(ಲೂಕ 24:49, ಅ.ಪೋ.ಕೃ 1:8)*, ಪರಿಶುದ್ಧಾತ್ಮನ ಸುರಿಸುವಿಕೆಯು ದೇವರ ಮುಂದೆ ಆತನು ಸಲ್ಲಿಸಿದ ಮೊದಲ ಮಧ್ಯಸ್ಥಿಕೆಯ ಕಾರ್ಯವಾಗಿತ್ತು *(ಯೋಹಾನ 14:16,26; 15:26)*. ಪಂಚಾಶತ್ತಮ ದಿನದಲ್ಲಿ ಈ ವಾಗ್ದಾನವು ನೆರವೇರಿತು.

ಯೇಸುವು ಶಿಲುಬೆಯ ಮೇಲೆ ಮಾಡಿದ ತ್ಯಾಗ ಮತ್ತು ಪರಲೋಕದಲ್ಲಿ ಆತನಿಗೆ ನಡೆದ ಸನ್ಮಾನಕ್ಕಿಂತ ಪರಿಶುದ್ಧಾತ್ಮನ ಸುರಿಸುವಿಕೆಯು ಬಹಳ ವಿಶೇಷವಾದ ಕಾರ್ಯವಾಗಿತ್ತು. ಪರಿಶುದ್ಧಾತ್ಮನಿಂದ ತುಂಬಿಸಲ್ಪಡುವುದು ವಿಶ್ವಾಸಿಗಳ ಹೃದಯದಲ್ಲಿ ಒಂದು ಹೊಸ ಅನುಭವವನ್ನು ನೀಡುತ್ತದೆ, ಈ ಅನುಭವವು ಯಾವಾಗಲೂ ಅವರ ಹೃದಯದಲ್ಲಿ ನವಿಕರಿಸಲ್ಪಡುತ್ತದೆ. *(ಅ.ಪೋ.ಕೃ 4:8, 31; 11:24; 11:24; 13:9, 52; ಎಫೆಸ 5:18)*

**ನಿಮ್ಮ ಜೀವನದಲ್ಲಿ ಪವಿತ್ರಾತ್ಮನು ಕ್ರಿಯೆಗಳನ್ನು ಮಾಡುತ್ತಿದ್ದಾನೆ ಎಂಬುದನ್ನು ಯಾವ ರೀತಿಯ ಸಾಕ್ಷಿಗಳಿವೆ?**

**ಸೋಮವಾರ** ಜುಲೈ 9

## ಭಾಷೆಗಳ ವರ

ಅ.ಪೋ.ಕೃ 2:4 ರಲ್ಲಿ ಪವಿತ್ರಾತ್ಮನ ವರವನ್ನು ಭಾಷೆಗಳನ್ನು ಮಾತನಾಡುವ ಮೂಲಕ ಗುರುತಿಸಲಾಗಿದೆ. ಆದರೂ ಕೂಡ ಭಾಷೆಗಳನ್ನು ಆಡುವುದು ಆತ್ಮನ ಆನೇಕ ವರಗಳಲ್ಲಿ ಅದು ಕೂಡ ಒಂದಾಗಿದೆ *(ಅ.ಪೋ.ಕೃ 10:45, 46; 19:6)*. ಆತ್ಮನ ಇತರೆ ವರಗಳನ್ನು ನೋಡುವುದಾದರೆ ಭವಿಷ್ಯವನ್ನು ನುಡಿಯುವುದು *(ಅ.ಪೋ.ಕೃ 3:6,12; 5:12, 16)*, ಪ್ರೇರಣೆಯ ಮಾತುಗಳು *(ಅ.ಪೋ.ಕೃ 2:8, 28:25)*, ಗುಣಪಡಿಸುವುದು *(ಅ.ಪೋ.ಕೃ 3:6,12; 5:12,1*6). ಮತ್ತು ಸೇವೆಗಾಗಿ ಅರ್ಹತೆಯನ್ನು ಪಡೆಯುವುದು *(ಅ.ಪೋ.ಕೃ 6:3, 5).*

ಪಂಚಾಶತ್ತಮ ದಿನದಲ್ಲಿ ಆತ್ಮನ ಸುರಿಸುವಿಕೆಯು ಒಂದು ವಿಶೇಷವಾದ ಉದ್ದೇಶ ಅಥವಾ ಪರಿಶುದ್ಧಾತ್ಮನ ಪ್ರಸನ್ನತೆಯ ಮುಖ್ಯ ಸಾಕ್ಷಿಗಾಗಿ ನೀಡಲಾಗಿರಲಿಲ್ಲ ಬದಲಿಗೆ ಸಭೆಯು ತನ್ನ ಸುವಾರ್ತೆಯ ಸೇವೆಯನ್ನು ಇಡೀ ಲೋಕಕ್ಕೆ ಸಾರುವ ಪ್ರಾರಂಭಕ್ಕಾಗಿ ನೀಡಲಾಗಿತ್ತು. ಇದನ್ನು ಅ.ಪೋ.ಕೃ 1:8 ರಲ್ಲಿ ಭಾಷೆಗಳನ್ನು ಆಡುವುದರ ಮೂಲಕ ಆರಂಭ ಮಾಡಲಾಗಿದೆ.

ಅಪೋಸ್ತಲರು ಎಲ್ಲಾ ಭಾಷೆಗಳ ಮತ್ತು ಸಂಸ್ಕೃತಿಗಳ ಬೇಲಿಯನ್ನು ದಾಟಿ ಸುವಾರ್ತೆಯನ್ನು ಇಡೀ ಲೋಕದ ಕಟ್ಟಕಡೆಯವರೆಗೂ ತೆಗೆದುಕೊಂಡು ಹೋಗಬೇಕಾದರೆ ಅವರು ಅನೇಕ ಭಾಷೆಗಳನ್ನು ಮಾತನಾಡಬೇಕಾಗಿತ್ತು. ಅದಲ್ಲದೆ ಅವರು ಮಾತನಾಡುವ ಭಾಷೆಯನ್ನೂ ಅನೇಕರು ಅವರ ಸ್ವಂತ ಭಾಷೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗಿತ್ತು.

**ಅ.ಪೋ.ಕೃ 2:5-12 ನ್ನು ಓದಿರಿ. ಅಲ್ಲಿ ಅರ್ಥವಾಗುವ ರೀತಿಯಲ್ಲಿ ಅಪೋಸ್ತಲರು ಅನ್ಯಭಾಷೆಗಳನ್ನು ಯಾವ ರೀತಿಯಲ್ಲಿ ಮಾತನಾಡಿದರು?**

_______________________________________________________________

_______________________________________________________________

ಮೊದಲನೇಯ ಶತಮಾನದಲ್ಲಿ ಸುಮಾರು ಎಂಟು ಮಿಲಿಯನ್ ಯೆಹೂದ್ಯರು ಪ್ರಪಂಚದ ಎಲ್ಲಾ ಭಾಗಗಳಲ್ಲಿ ಜೀವಿಸುತ್ತಿದ್ದರು, ಅವರಲ್ಲಿ ಹೆಚ್ಚಿನವರು ಯೂದಯ ಪ್ರಾಂತ್ಯದ ಹೊರಗಡೆ ವಾಸಿಸುತ್ತಿದ್ದರು, ಆದರೂ ಕೂಡ ಆ ದಿನದಲ್ಲಿ ಯೇರುಷಲೆಮಿಗೆ ಬಂದಿದ್ದ ಅನೇಕರು ಹೊರಗಡೆಯಿಂದ ಬಂದವರಾಗಿದ್ದರು ಅವರಿಗೆ ಆ ದಿನಗಳಲ್ಲಿ ಪ್ರಚಲಿತವಾಗಿದ್ದ ಅರಾಮಿಕ್ ಭಾಷೆಯು ಅರ್ಥವಾಗುತ್ತಿರಲಿಲ್ಲ.

ಪಂಚಾಶತ್ತಮ ದಿನದಲ್ಲಿ ಮಾನಸಾಂತರ ಹೊಂದಿದ ಅನೇಕ ಯೆಹೂದ್ಯರು ಬೇರೆ ಭಾಗಗಳಿಂದ ಬಂದಿದ್ದವರಾಗಿದ್ದು ಅವರು ಪೇತ್ರನ ಪ್ರಸಂಗವನ್ನು ತಮ್ಮ ಸ್ವಂತ ಭಾಷೆಯಲ್ಲಿ ಅರ್ಥಮಾಡಿಕೊಂಡಿದ್ದರು. ಅವರಿಗೆ ಶಿಷ್ಯರು ತಮ್ಮ ಸ್ವಂತ ಭಾಷೆಯಲ್ಲಿ ಮಾತನಾಡಿದರು ಎಂಬ ಭಾವನೆ ಉಂಟಾಯಿತೆ ಹೊರೆತು ಶಿಷ್ಯರು ಬೇರೆ ಭಾಷೆಯಲ್ಲಿ ಮಾತನಾಡಿದರು ಎಂದು ಅವರು ಭಾವಿಸಲಿಲ್ಲ. ಇದನ್ನು ಅ.ಪೋ.ಕೃ 2:6,8 ಇರುವ ಇತರೆ ಭಾಷೆಗಳ ಪಟ್ಟಿಯಲ್ಲಿ ನೋಡಬಹುದು. ಇದರ ಅರ್ಥವೆಂದರೆ ಒಂದೊಂದು ಪ್ರಾಂತ್ಯಕ್ಕೂ ಒಂದೊಂದು ಭಾಷೆಯಿತ್ತು. (ಅ.ಪೋ.ಕೃ 21:40, 22:2, 26:14 ರ ಜೊತೆಗೆ ಹೋಲಿಸಿ ನೋಡಿರಿ). ಹಾಗಾದರೆ ಸ್ಪಷ್ಟವಾಗಿ ಶಿಷ್ಯರು ಬೇರೆ ಭಾಷೆಯಲ್ಲಿ ಮಾತನಾಡುತ್ತಿದ್ದರು. ಅದ್ಭುತವೆಂದರೆ ಸಾಮಾನ್ಯ ಗಲಾಲಿಯದ ಬೆಸ್ತರು ಅವರಿಗೆ ಅರಿವಿಲ್ಲದ ಮತ್ತು ತಿಳಿಯದ ಭಾಷೆಯಲ್ಲಿ ಯಾವ ರೀತಿ ಮಾತನಾಡುತ್ತಿದ್ದರು. ಇದರ ಒಂದೇ ಒಂದು ಸಾಧ್ಯತೆಯೆಂದರೆ ಶಿಷ್ಯರು ಕುಡಿದಿರಬೇಕು, ಇದರಿಂದ ಅವರು ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡುತ್ತಾ ತೊದಲುತ್ತಾ ಇದ್ದರು ಇದರಿಂದ ಅವರನ್ನು ನೋಡಿದ ಕೆಲವರು "ಇವರು ಮದ್ಯಪಾನ ಮಾಡಿ ಮತ್ತರಾಗಿದ್ದಾರೆಂದು ಹಾಸ್ಯ ಮಾಡಿದರು" ಅ.ಪೋ.ಕೃ 2:13).

**ದೇವರ ವಿಶೇಷವಾದ ಪ್ರಸನ್ನತೆ ಅವರ ಕಣ್ಣುಗಳ ಮುಂದೆ ನಡೆಯುತ್ತಿದೆ, ಆದರೂ ಕೂಡ ಜನರು ಶಿಷ್ಯರನ್ನು ಕುಡಿದವರೆಂದು ಹಾಸ್ಯ ಮಾಡುತ್ತಿದ್ದಾರೆ? ಕೆಲವೊಂದು ಬಾರಿ ಆಧ್ಯಾತ್ಮಿಕ ಕುರುಡುತನ ಎಷ್ಟು ಅಪಾಯ ಎಂದು ಇದು ನಮಗೆ ತಿಳಿಸುತ್ತದೆ?**

ಮಂಗಳವಾರ ಜುಲೈ 10

## ಪೇತ್ರನ ಪ್ರಸಂಗ

ಕುಡಿದಿದ್ದಾರೆ ಎಂಬ ಅಪಾದನೆಯು ಪೇತ್ರನಿಗೆ ಏನು ನಡೆಯುತ್ತಿದೆ ಎಂಬುದನ್ನು ವಿವರಿಸಲು ಅವಕಾಶ ನೀಡಿತು. ಆವನ ಭಾಷಣದಲ್ಲಿ ಅಪೋಸ್ತಲನು ಮೊದಲಿಗೆ ಸತ್ಯವೇದವನ್ನು ಉಲ್ಲೇಖಿಸಿದನು *(ಅ.ಪೊ.ಕೃ 2:16-21*), ಪರಿಶುದ್ದಾತ್ಮನ ಸುರಿಸುವಿಕೆಯು ಪ್ರವಾದನೆಯ ನೇರವೆರಿಕೆಯಾಗಿದೆ ಎಂದು ತಿಳಿಸಿದನು.

**ಅ.ಪೋ.ಕೃ 2:17 ನ್ನು ಯೋವೇಲ 2:28 ರ ಜೊತೆಗೆ ಹೋಲಿಸಿರಿ ಯೋವೆಲನ ಮೂಲಕ ತಿಳಿಸಿರುವ ಈ ಪ್ರವಾದನೆಯು ನೆರವೇರುವ ಕಾಲವನ್ನು ಪೇತ್ರನು ಹೇಗೆ ಗುರುತಿಸುತ್ತಾನೆ?**

______________________________________________________________

______________________________________________________________

ಯೋವೆಲನ ಪ್ರವಾದನೆಯು ರಕ್ಷಣೆಯ ಕಾಲದ ಭವಿಷ್ಯವನ್ನು ತಿಳಿಸುತ್ತಿತ್ತು (ಯೋವೇಲ 2:32). ಆತ್ಮನ ಸುರಿಸುವಿಕೆಯು ಬಂದಾಗ ಸ್ವಾಭಾವಿಕ ಲೋಕದಲ್ಲಿ ಅನೇಕ ಅದ್ಭುತಗಳು ನಡೆಯುತ್ತವೆ ಎಂದು ಅದು ತಿಳಿಸುತ್ತದೆ. (ಯೋವೇಲ 2:28-31). ಪ್ರವಾದನೆಯ ಹಿನ್ನಲೆಯಲ್ಲಿ ಪಂಚಾಶತ್ತಮ ದಿನದ ಘಟನೆಯನ್ನು ವಿವರಿಸುತ್ತಾ ಪೇತ್ರನು ಆ ಘಟನೆಯ ಚಾರಿತ್ರಿಕ ಹಿನ್ನಲೆಯ ಮಹತ್ವವನ್ನು ತಿಳಿಸುತ್ತಿದ್ದಾನೆ. ಆದರೆ, ಯೋವೆಲನ ಪ್ರವಾದನೆಯನ್ನು ಅವನು ಹೇಳುವ ವಿಧಾನವು ವ್ಯತ್ಯಾಸವಾಗಿದೆ. ಪೇತ್ರನು "ಕೊನೆಯ ದಿನಗಳು" (ಅ.ಪೋ.ಕೃ 2:17), ಎಂದು ಹೇಳುವ ಮೂಲಕ ಪೇತ್ರನು ರಕ್ಷಣೆಯ ಕಾಲದ ಕೊನೆಯ ಹಂತಕ್ಕೆ ನಾವು ತಲುಪಿದ್ದೇವೆ ಎಂದು ಅವರಿಗೆ ತಿಳಿಸುತ್ತಾನೆ. ಇದು ಕೊನೆಯ ದಿನಗಳ ಮಹತ್ತರವಾದ ಘಟನೆಯ ಕೊನೆಯಲ್ಲ ಬದಲಿಗೆ ಆ ಘಟನೆಗಳ ಆರಂಭವನ್ನು ಆದಿ ಸಭೆಯಲ್ಲಿ ನಡೆಯುವ ಕ್ರಿಯೆಗಳ ಮೂಲಕ ಸೂಚಿಸುತ್ತದೆ. ಅವರಿಗೆ ಅಂತ್ಯವು ಯಾವಾಗ ಬರುತ್ತದೆ ಎಂದು ಗೊತ್ತಿರಲಿಲ್ಲ ಆದರೆ ಅದು ಅತೀ ಶೀಘ್ರದಲ್ಲಿ ಬರುತ್ತದೆ ಎಂದು ಅವರಿಗೆ ಗೊತ್ತಿತ್ತು.

**ಅ.ಪೋ. ಕೃ 2:22-32 ನ್ನು ಓದಿರಿ. ಪೇತ್ರನು ಹೇಳುವ ಸುವಾರ್ತೆಯ ಮುಖ್ಯವಾದ ಅಂಶವೇನು?**

____________________________________________________________

____________________________________________________________

ಪಂಚಾಶತ್ತಮ ದಿನದ ಪ್ರವಾದನೆಯ ಪ್ರಾಮುಖ್ಯತೆಯನ್ನು ವಿವರಿಸಿದ ನಂತರ ಪೇತ್ರನು ಯೇಸುವಿನ ಜೀವನ, ಮರಣ, ಮತ್ತು ಪುನರುತ್ಥಾನದ ಘಟನೆಗಳ ಕಡೆಗೆ ಗಮನವನ್ನು ಹರಿಸುತ್ತಾನೆ, ಇದರ ಮೂಲಕ ಸುವಾರ್ತೆಯ ಕಥೆಯ ಮುಖ್ಯವಾದ ಅಂಶವನ್ನು ಆತನು ಉಲ್ಲೇಖಮಾಡುತ್ತಾನೆ. ಪೇತ್ರನಿಗೆ ಯೇಸುವಿನ ಪುನರುತ್ಥಾನವು ಬಹಳ ಮುಖ್ಯವಾದ ಘಟನೆಯಾಗುತ್ತದೆ. (ಅ.ಪೋ.ಕೃ 2:22,27), ಮತ್ತು ಪುನರುತ್ಥಾನದ ವಿಷಯವನ್ನು ತಿಳಿಸಲು ಆತನು ವಾಕ್ಯದ ಆಧಾರವನ್ನು ತೆಗೆದುಕೊಳ್ಳುತ್ತಾನೆ.

ಯೇಸುವು ಮೆಸ್ಸಿಯನಾಗಿದ್ದರಿಂದ, ಮರಣವು ಆತನನ್ನು ಬಂಧಿಸಲು ಸಾಧ್ಯವಾಗಲಿಲ್ಲ. ಪೇತ್ರನಿಗೆ ಮತ್ತು ಹೊಸ ಒಡಂಬಡಿಕೆಯ ಎಲ್ಲಾ ಬರಹಗಾರರಿಗೆ ಯೇಸುವಿನ ಪುನರುತ್ತಾನವು ಒಂದು ಶಕ್ತಿಶಾಲಿಯಾದ ಸಾಕ್ಷಿಯಾಗಿ

ಬದಲಾಯಿತು, ಇದು ಕೇವಲ ಯೇಸುವನ್ನು ಮೆಸ್ಸಿಯನು ಎಂದು ತೋರಿಸುವುದು ಅಲ್ಲದೆ ಇಡೀ ಕ್ರೈಸ್ತ ರಕ್ಷಣೆಯ ಸಂದೇಶದ ಮುಖ್ಯವಾದ ತಿರುಳಾಯಿತು.

**ಮರಣವು ನಮ್ಮ ಸುತ್ತಲೂ ಆವರಿಸಿಕೊಂಡು ನಮ್ಮ ಪ್ರೀತಿ ಪಾತ್ರರನ್ನು ನುಂಗುತ್ತಿರುವಾಗ ಯೇಸುವಿನ ಪುನರುತ್ಥಾನವು ನಮಗೆ ಯಾವ ರೀತಿಯ ಭರವಸೆಯನ್ನು ನೀಡುತ್ತದೆ?**

**ಬುಧವಾರ** ಜುಲೈ 11

## ಯೇಸುವಿನ ಪ್ರಶಂಸೆ

**"ಆತನು ದೇವರ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವುದನ್ನು ಸುರಿಸಿದ್ದಾನೆ. (ಅ.ಪೋ.ಕೃ 2:33).**

ಪೇತ್ರನು ತನ್ನ ಪ್ರಸಂಗದ ಮೂರನೆಯ ಭಾಗದಲ್ಲಿ ಭಾಷೆಗಳ ವಿಷಯಕ್ಕೆ ಮರಳುತ್ತಾನೆ, ಯಾಕೆಂದರೆ ಅದು ಮೊದಲ ಭಾಗದಲ್ಲಿ ಅನೇಕರನ್ನು ಆಕರ್ಷಿಸಿತ್ತು. ಬೆಳಗಿನ ಒಂಭತ್ತು ಘಂಟೆಯ ಸಮಯದಲ್ಲಿ ಕುಡಿಯುವುದು (ಅ.ಪೋ.ಕೃ 2:15), ಬಹಳ ವಿರಳವಾದ ವಿಷಯವಾದ್ದರಿಂದ ಶಿಷ್ಯರು ಆಗ ತಾನೇ ಪರಲೋಕದಿಂದ ಇಳಿದು ಬಂದಿದ್ದ ಆತ್ಮನ ಪರವಶರಾಗಿದ್ದರೆಂದು ಅವನು ಸ್ಪಷ್ಟ ಪಡಿಸುತ್ತಾನೆ.

**ಅ.ಪೋ.ಕೃ 2:33-36 ನ್ನು ಓದಿರಿ. ಪರಲೋಕದಲ್ಲಿ ದೇವರ ಬಲಗಡೆಯಲ್ಲಿ ಯೇಸುವಿನ ಉನ್ನತ ಸ್ಥಾನಕ್ಕೂ ಪರಿಶುದ್ಧಾತ್ಮನ ಸುರಿಸುವಿಕೆಗೂ ಇರುವ ಸಂಭಂದವೇನು?**

____________________________________________________________

____________________________________________________________

ದೇವರ ಬಲಗೈ ಎಂಬುದು ಅಧಿಕಾರದ ಸ್ಥಾನವಾಗಿದೆ (ಕೀರ್ತನೆ 110:1-3). ಪೇತ್ರನು ವಾಕ್ಯದ ಮೂಲಕ ಹೇಳುವ ಪ್ರಕಾರ, ಯೇಸುವು ದೇವರ ಬಲಗೈ ಅಧಿಕಾರದ ಕಡೆಯಲ್ಲಿ ನಿಂತಿರುವುದರಿಂದ ಆತನು ಪವಿತ್ರಾತ್ಮನನ್ನು ಈ ಲೋಕಕ್ಕೆ ತನ್ನ ಹಿಂಬಾಲಕಾರಿಗಾಗಿ ಕಳುಹಿಸುವ ಅಧಿಕಾರವನ್ನು ಆತನು ಹೊಂದಿದ್ದಾನೆ. ಈ ಸನ್ಮಾನವು ಯೇಸುವಿಗೆ ಈ ಹಿಂದೆ ಇದ್ದ ಸ್ಥಾನವನ್ನು ಮತ್ತೆ ಪಡೆಯುವಂತೆ ಮಾಡಲಿಲ್ಲ (ಯೋಹಾನ 1:1-3,17:5). ಬದಲಿಗೆ, ತಂದೆಯಾದ ದೇವರು ಆತನ ಉನ್ನತವಾದ ಸ್ಥಾನವನ್ನು ಒಪ್ಪಿಕೊಂಡು ಅದನ್ನು ಆತನಿಗೆ ಆದಿಯಿಂದಲೂ ಕೂಡ ನೀಡಿದ್ದನು (ಅ.ಪೋ.ಕೃ 2:36).

ಈ ಘಟನೆಯು ಸತ್ಯವೇದದ ಮುಖ್ಯವಾದ ಸತ್ಯಕ್ಕೆ ನಮ್ಮನ್ನು ನಡೆಸುತ್ತದೆ: ಒಳ್ಳೆಯದರ ಮತ್ತು ಕೆಟ್ಟದರ ನಡುವಿನ ಮಹಾಹೋರಾಟ. ಯೇಸುವು ಉನ್ನತ ಸ್ಥಾನಕ್ಕೆ ಏರಿಸಲ್ಪಡದಿದ್ದರೆ ಪರಿಶುದ್ಧಾತ್ಮನು ಇಳಿದು ಬರುತ್ತಿರಲಿಲ್ಲ. (ಯೋಹಾನ 7:39), ಮತ್ತು ಯೇಸುವಿನ ಸನ್ಮಾನವು ಪರಿಶುದ್ಧಾತ್ಮನ ಬರೋಣಕ್ಕೆ ದಾರಿಯನ್ನು ಸುಗಮ ಮಾಡಿತು. ಯಾಕೆಂದರೆ ಇದು ಯೇಸುವು ಶಿಲುಬೆಯ ಮೇಲೆ ಮಾಡಿದ ತ್ಯಾಗವನ್ನು ತಂದೆಯಾದ ದೇವರು ಅಂಗಿಕರಿಸಿದನು. ಇಡೀ ಲೋಕವನ್ನು ಮೋಸಗೊಳಿಸಿದ ಸೈತಾನನನ್ನು ಸೋಲಿಸಿವುದು ಇದರ ಭಾಗವಾಗಿತ್ತು. (ಯೋಹಾನ 12:31).

ಲೋಕದೊಳಗೆ ಪಾಪದ ಪ್ರವೇಶವು ದೇವರ ಮೇಲೆ ಕರಿ ನೆರಳನ್ನು ಚೆಲ್ಲಿತ್ತು. ಯೇಸುವಿನ ಮರಣವು ಮಾನವರನ್ನು ಅವರ ಪಾಪದಿಂದ ಬಿಡಿಸುವುದು ಮಾತ್ರವಲ್ಲದೆ ದೇವರ ಗುಣವನ್ನು ಲೋಕಕ್ಕೆ ಸಾರುವುದು ಮತ್ತು ಸೈತಾನನ ನಿಜ ಸ್ವರೂಪವನ್ನು ಲೋಕಕ್ಕೆ ತಿಳಿಸುವ ಮಾರ್ಗವಾಗಿತ್ತು. ಯೇಸುವಿನ ಸೇವೆಯಲ್ಲಿ ರಕ್ಷಣೆಯ ಕಾರ್ಯವು ಆಗಲೇ ಕಾರ್ಯಗತವಾಗಿತ್ತು. ಆದರೂ ಕೂಡ, ಶಿಲುಬೆಯು ಈ ಕಾರ್ಯವನ್ನು ಸಂಪೂರ್ಣವಾಗಿ ನೆರವೇರಿಸಲು ಅನುಕೂಲ ಮಾಡಿಕೊಟ್ಟಿತು. ಆದ್ದರಿಂದ ಕ್ರಿಸ್ತನ ಸ್ವಯಂ ಪ್ರೇರಿತವಾದ ತ್ಯಾಗವು ಪರಲೋಕದಲ್ಲಿ ಅಂಗಿಕಾರವಾಯಿತು ಸೈತಾನನಿಗೆ ಅಳಿಸಲಾರದ ಗಾಯವಾಯಿತು. ಮತ್ತು ಪರಿಶುದ್ಧಾತ್ಮನ ಬರುವಿಕೆಯಿಂದ ಜನರನ್ನು ಆತನ ಬರೋಣಕ್ಕೆ ಸಿದ್ಧರಾಗುವಂತೆ ಮಾಡಿತು.

**ಗುರುವಾರ** ಜುಲೈ 12

## ಪ್ರಥಮ ಫಲಗಳು

ಪೇತ್ರನ ಪ್ರಸಂಗವನ್ನು ಕೇಳುತ್ತಿದ್ದವರು ಅವನ ಮಾತುಗಳಿಂದ ಹೃದಯದಲ್ಲಿ ಬಹಳವಾಗಿ ನೊಂದುಕೊಂಡರು. ಅವರಲ್ಲಿ ಕೆಲವರು ಕೆಲವು ವಾರಗಳ ಹಿಂದೆ ಯೇಸುವನ್ನು ಶಿಲುಬೆಗೆ ಏರಿಸಿಬೇಕು ಎಂದು ಕೇಳಿಕೊಂಡಿದ್ದರು (ಲೂಕ 23:13-25). ಆದರೆ ಈಗ, ನಜರೆತಿನ ಯೇಸುವು ದೇವರು ನಿಯಮಿಸಿದ ಮೆಸ್ಸಿಯನಾಗಿದ್ದಾನೆ ಎಂದು ಅರಿತುಕೊಂಡು ಅವರು ಬಹಳ ದುಃಖ ಪಟ್ಟರು ಮತ್ತು "ನಾವು ಏನು ಮಾಡಬೇಕು" ಎಂದು ಕೇಳಿದರು (ಅ.ಪೋ.ಕೃ 2:37).

**ಅ.ಪೋ.ಕೃ 2:38 ನ್ನು ಓದಿರಿ. ಪಶ್ಚಾತ್ತಾಪಕ್ಕೆ ಅವಶ್ಯಕವಾದ ಎರಡು ಮುಖ್ಯವಾದ ಅವಶ್ಯಕತೆಗಳು ಯಾವುವು?**

___________________________________________________________________

___________________________________________________________________

ಪಶ್ಚಾತ್ತಾಪ ಎಂದರೆ ಜೀವನದ ದಿಕ್ಕಿನಿಂದ ಮಹತ್ತರ ಬದಲಾವಣೆಯನ್ನು ಪಡೆಯುವುದು, ಪಾಪದಿಂದ ತಿರುಗಿಕೊಂಡು ಹೊಸ ಜೀವನವನ್ನು ನಡೆಸುವುದು *(ಅ.ಪೋ.ಕೃ 3:19, 26:20)*, ಹೊರೆತು ಕೇವಲ ದುಃಖ ಮತ್ತು ನೋವನ್ನು ತೋರಿಸುವುದಲ್ಲ. ನಂಬಿಕೆಯ ಜೊತೆಗೆ ನಿಜವಾದ ಪಶ್ಚಾತ್ತಾಪವು ದೇವರ ವರವಾಗಿದೆ, ಆದರೆ ಎಲ್ಲಾ ವರಗಳ ಹಾಗೆಯೇ ಇದನ್ನು ಕೂಡ ನಾವು ತಿರಸ್ಕರಿಸಬಹುದು.

ಸ್ನಾನಿಕನಾದ ಯೋಹಾನ ಕಾಲದಿಂದಲೂ ಕೂಡ ಪಶ್ಚಾತ್ತಾಪವು ದೀಕ್ಷಾಸ್ನಾನದ ಜೊತೆಗೆ ಬೆಸೆದುಕೊಂಡಿದೆ *(ಮಾರ್ಕ 1:4)*. ದೀಕ್ಷಾಸ್ನಾನವು ಪಶ್ಚಾತ್ತಾಪದ ಬಹಿರಂಗ ಪ್ರದರ್ಶನವಾಗಿದೆ. ಪಾಪವನ್ನು ಸಂಪೂರ್ಣವಾಗಿ ತೊಳೆದುಕೊಂಡಿರುವ ಮತ್ತು ಪವಿತ್ರಾತ್ಮನಿಂದ ಹೊಂದಿರುವ ಹೊಸ ನೈತಿಕ ಜೀವನದ ಆರಂಭವಾಗಿದೆ (*ಅ.ಪೋ.ಕೃ 2:38, 22:16;ನ್ನು ತೀತನಿಗೆ 3:5-7 ರ ಜೊತೆಗೆ ಹೋಲಿಸಿರಿ*).

**ಅ.ಪೋ.ಕೃ 2:38,39 ನ್ನು ಓದಿರಿ. ಯಾರು ಪಶ್ಚಾತ್ತಾಪವನ್ನು ಹೊಂದಿ ದೀಕ್ಷಾಸ್ನಾನವನ್ನು ಹೊಂದಿಕೊಳ್ಳುವರೋ ಅವರಿಗೆ ಯಾವ ರೀತಿಯ ವಾಗ್ದಾನಗಳು ನೀಡಲಾಗಿದೆ?**

______________________________________________________________________

______________________________________________________________________

______________________________________________________________________

ಪೆಂತಿಕೊಸ್ತಿನ ದಿನದಂದು ಜನರಿಗೆ ಕೇವಲ ಅವರ ಪಾಪಗಳಿಗೆ ಕ್ಷಮಾಪಣೆಯನ್ನು ಮಾತ್ರ ನೀಡದೆ ಅವರಿಗೆ ಸಂಪೂರ್ಣವಾದ ಪರಿಶುದ್ಧಾತ್ಮನ ಶಕ್ತಿಯನ್ನು ನೀಡುವುದರ ಮೂಲಕ ವ್ಯಯಕ್ತಿಕವಾಗಿ ಬೆಳೆಯುವುದಲ್ಲದೆ, ಸಭೆಯ ಸೇವೆಗಾಗಿ ಮತ್ತು ವಿಶೇಷವಾಗಿ ಸುವಾರ್ತೆಗಾಗಿ ಸಿದ್ಧರಾಗುವಂತೆ ಸಹಾಯ ಮಾಡಿತು. ರಕ್ಷಣೆಯ ಸುವಾರ್ತೆಯನ್ನು ತಿಳಿಸುವುದಕ್ಕಾಗಿ ಮಾತ್ರ ಸಭೆಯು ಈ ಲೋಕದಲ್ಲಿದೆ (1 ಪೇತ್ರನು 2:9). ಆದ್ದರಿಂದ, ಈ ಅಂಶದಿಂದ, ಅವರಿಗೆ ರಕ್ಷಣೆಯ ಭರವಸೆ ಮತ್ತು ಪರಿಶುದ್ಧಾತ್ಮನ ಶಕ್ತಿಯನ್ನು ಕೂಡ ನೀಡಲಾಯಿತು. ಇದರಿಂದ ಸಭೆಯು ತಾನು ಕರೆಯಲ್ಪಟ್ಟ ಕಾರ್ಯಕ್ಕೆ ಸಿದ್ಧವಾಗುವಂತೆ ಸಹಾಯ ಮಾಡಿತು.

**ಸುವಾರ್ತೆಯನ್ನು ಸಾರುವವರಿಗೆ ತಮ್ಮ "ಪಾಪಗಳು ಕ್ಷಮಿಸಲ್ಪಟ್ಟಿವೆ" ಎಂಬ ಭರವಸೆ ಯಾಕೆ ಅಷ್ಟು ಪ್ರಾಮುಖ್ಯವಾಗಿದೆ? ನಿಮ್ಮಲ್ಲಿ ಇರದಿರುವ ಭರವಸೆಯನ್ನು ನೀವು ಬೇರೆಯವರಿಗೆ ಯಾವ ರೀತಿಯಲ್ಲಿ ನೀಡುವಿರಿ?**

**ಶುಕ್ರವಾರ** ಜುಲೈ 13

**ಹೆಚ್ಚಿನ ಚಿಂತನೆ :**

**ಚರ್ಚಿಸಬೇಕಾದ ಪ್ರಶ್ನೆಗಳು**

1. ಸಮೃದ್ಧಿಯ ಸುವಾರ್ತೆಯ ಕುರಿತಾಗಿ ಆಲೋಚಿಸಿರಿ. ಇದನ್ನು ಪ್ರತಿಪಾದಿಸುವವರು ಯಾವ ವಚನಗಳನ್ನು ಉಪಯೋಗಿಸಬಹುದು? ಆದೆ ಸಮಯದಲ್ಲಿ ಈ ಸುಳ್ಳು ಬೋಧನೆಗೆ ವಿರುದ್ಧವಾಗಿ ಜೀವಿಸಿರುವ ಯಾವ ವ್ಯಕ್ತಿಗಳನ್ನು ಸತ್ಯವೇದದಲ್ಲಿ ನೀವು ನೋಡಬಹುದು?
2. ತನ್ನ ಮೊದಲ ಮಗುವು ಸ್ವಲ್ಪ ದೊಡ್ಡದಾದ ಮೇಲೆ ಒಬ್ಬ ಮನುಷ್ಯನು ಹೀಗೆ ಹೇಳಿದನು:"ಈ ಮಗುವಿನಿಂದ ನಾನು ಎರಡು ಮುಖ್ಯವಾದ ಸತ್ಯವೇದದ ಪಾಠಗಳನ್ನು ಕಲಿತಿದ್ದೇನೆ. ಮೊದಲನೇಯದಾಗಿ ನಾವು ಪಾಪದಲ್ಲಿ ಹುಟ್ಟಿದ್ದೇವೆ. ಎರಡನೇಯದಾಗಿ ನಾವು ಹುಟ್ಟಿನಿಂದಲೇ ದುರಾಶೆಯಲ್ಲಿ ಹುಟ್ಟಿದ್ದೇವೆ." ಮಕ್ಕಳು ಸ್ವಾಭಾವಿಕವಾಗಿ ದುರಾಶೆಯಿಂದ ಹುಟ್ಟಿರುತ್ತಾರೆ ಎಂಬುದನ್ನು ಕಥೆಗಳ ಮೂಲಕ ಯಾರು ವಿವರಿಸುತ್ತಾರೆ? ಇದು ದೈವಿಕ ಕೃಪೆಯ ಅವಶ್ಯಕತೆಯ ಕುರಿತಾಗಿ ಏನು ಹೇಳುತ್ತದೆ?
3. ಒಂದು ವೇಳೆ ನಾವು ಎಲ್ಲಾ ಕಷ್ಟಗಳ ಮೂಲವನ್ನು ಹುಡುಕುತ್ತಿದ್ದರೆ ನಾವು ಜನರಲ್ಲಿರುವ ಮೂರ್ಖತನ, ಅಜ್ಞಾನ, ದುರಾಶೆ ಮತ್ತು ಅಧಿಕಾರದ ಮೋಹಕ್ಕಾಗಿ ಹುಡುಕಬೇಕು ಎಂದು ಒಬ್ಬ ವ್ಯಕ್ತಿ ಬರೆಯುತ್ತಾರೆ.

ಜನರನ್ನು ಹೆಚ್ಚಾಗಿ ಹಾಳುಮಾಡುವ ದುರಾಶೆಯ ಕುರಿತಾಗಿ ಏನು ಹೇಳಬಹುದು ಅದು ಅವನನ್ನು ಅಥವಾ ಅವಳನ್ನು ಹಾಳು ಮಾಡುವುದು ಮಾತ್ರವಲ್ಲದೆ ಅವರ ಸುತ್ತಲೂ ಇರುವವರನ್ನೂ ಕೂಡ ಹಾಳುಮಾಡುತ್ತದೆ ? ದುರಾಶೆಯಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಹೇಗೆ ಅದು ಸರ್ವನಾಶ ಮಾಡುತ್ತದೆ ಎನ್ನುವುದಕ್ಕೆ ನೀವು ಯಾವ ಉದಾಹರಣೆಗಳನ್ನು ನೀಡುವಿರಿ?